**ರಂಗಕರ್ಮಿ ನ.ರತ್ನ ಅವರ ನಿಧನಕ್ಕೆ ನಾಡೋಜ ಡಾ.ಮಹೇಶ ಜೋಶಿ ತೀವ್ರ ಸಂತಾಪ**

ಬೆಂಗಳೂರು: ಖ್ಯಾತ ರಂಗಕರ್ಮಿ, ಮೈಸೂರಿನಲ್ಲಿ ರಂಗ ಚಟುವಟಿಕೆಗಳ ಕೇಂದ್ರ ಎನ್ನಿಸಿ ಕೊಂಡಿದ್ದ ನ.ರತ್ನ ಅವರ ನಿಧನಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿ ತೀವ್ರ ಸಂತಾಪವನ್ನು ಸೂಚಿಸಿದ್ದಾರೆ. ಕನ್ನಡದಲ್ಲಿ ಅಸಂಗತ ನಾಟಕಗಳ ಪರಿಕಲ್ಪನೆ ಬಂದಾಗ ಅದನ್ನು ಜನರಿಗೆ ತಲುಪಿಸುವಲ್ಲಿ ರತ್ನಾ ಅವರು ನೀಡಿದ ಕೊಡುಗೆ ಮಹತ್ವದ್ದು ಅವರು ಸ್ಥಾಪಿಸಿದ ಸಮತೆಂತೋ(ಸರಸ್ವತಿಪುರಂ ಮಧ್ಯದ ತೆಂಗಿನ ತೋಪು) ಮೈಸೂರು ಮಾತ್ರವಲ್ಲದೆ ಕರ್ನಾಟಕದೆಲ್ಲೆಡೆ ರಂಗಭೂಮಿಯಲ್ಲಿ ಹೊಸತನವನ್ನು ತಂದಿತು. ಅವರ ನಿಕಟ ಒಡನಾಡಿಯಾಗಿದ್ದ ರಾಜೀವ ತಾರಾನಾಥರು ಇತ್ತೀಚೆಗೆ ತಾನೆ ನಮ್ಮನ್ನು ಅಗಲಿದರು . ಮೈಸೂರಿನ ಸಾಂಸ್ಕೃತಿಕ ರತ್ನಗಳು ಹೀಗೆ ಒಂದೊಂದಾಗಿ ಕಳಚುತ್ತಿರುವುದು ವಿಷಾದನೀಯ ಸಂಗತಿ ಎಂದು ನಾಡೋಜ ಡಾ. ಮಹೇಶ ಜೋಶಿ ತಮ್ಮ ಸಂತಾಪ ಸೂಚಕ ಸಂದೇಶದಲ್ಲಿ ತಿಳಿಸಿದ್ದಾರೆ.

ತಮಿಳುನಾಡಿನ ಚಿದಂಬರಂನಲ್ಲಿ ಡಾ.ಎ.ಎಂ.ವೆಂಕಟೇಶ್ ಮತ್ತು ವಿಠೋಬಾಯಿ ಅಮ್ಮಾಳ್ ಅವರ ಮಗನಾಗಿ 1934ರ ಡಿಸಂಬರ್ 12ರಂದು ಜನಿಸಿದ್ದ ರಂಗ ಅವರ ವಿದ್ಯಾಭ್ಯಾಸವೆಲ್ಲವೂ ನಡೆದಿದ್ದು ಮೈಸೂರಿನಲ್ಲಿ ಮಹಾರಾಜ ಕಾಲೇಜಿನಲ್ಲಿ ಬಿ.ಎ(ಅನರ್ಸ್) ಪದವಿಯನ್ನು ಪಡೆದ ನಂತರ ಅಮೆರಿಕಾಕ್ಕೆ ತೆರಳಿ ನ್ಯೂಯಾರ್ಕ್ನ ಹಂಟರ್ ವಿಶ್ವವಿದ್ಯಾಲಯ ಮತ್ತು ಇಂಡಿಯಾನ ವಿಶ್ವವಿದ್ಯಾಲಯದಲ್ಲಿ ವಾಕ್ ಶ್ರವಣ ವಿಷಯಕ್ಕೆ ಸಂಬಂಧಿಸಿದಂತೆ ಎಂ.ಎಸ್ ಪದವಿ ಮತ್ತು ಡಾಕ್ಟೋರೇಟ್ ಎರಡನ್ನೂ ಪಡೆದರು. ಮೈಸೂರಿಗೆ ಬಂದ ನಂತರ ಆಯುಷ್ ಸ್ಥಾಪನೆಯಾದಾಗ ಅದರ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ರತ್ನ 1985ರಲ್ಲಿ ನ್ಯಾಷನಲ್ ಇನ್ಸಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಕೇಂದ್ರದ ನಿರ್ದೇಶಕರಾದರು. ಈ ಕ್ಷೇತ್ರದಲ್ಲಿ ಕೂಡ ಅವರ ಸಾಧನೆ ಮಹತ್ವದ್ದು ಎಂದಿರುವ ನಾಡೋಜ ಡಾ.ಮಹೇಶ ಜೋಶಿಯವರು ರತ್ನ ಅವರ ಬಹುಮುಖಿ ವ್ಯಕ್ತಿತ್ವವನ್ನು ಸ್ಮರಿಸಿ ಕೊಂಡಿದ್ದಾರೆ.

ಮೈಸೂರು ರಂಗಭೂಮಿಗೆ ಹೊಸ ರೂಪ ಕೊಟ್ಟ ರತ್ನಾ ಅನಂತಮೂರ್ತಿಯವರ 'ಅವಸ್ಥೆ' ಪೂರ್ಣಚಂದ್ರ ತೇಜಸ್ವಿಯವರ 'ಯಮಳ ಪ್ರಶ್ನೆ5" ಸುಮತೀಂದ್ರನಾಡಿಗರ 'ಬೊಕ್ಕು ತಲೆ ನರ್ತಕಿ'ಯಂತಹ ವಿಶಿಷ್ಟ ನಾಟಕಗಳನ್ನು ರಂಗಕ್ಕೆ ತಂದರು. ತಾವೇ 'ಎಲ್ಲಿಗೆ ಮತ್ತು ಇತರ ಕತೆಗಳು' 'ಬೊಂತೆ' 'ಗೋಡೆ ಏಕೆ ಗೋಡೆ' ಯಂತಹ ವಿಶಿಷ್ಟ ಕೃತಿಗಳನ್ನು ಬರೆದ್ದಿದ್ದರು. ಹಲವು ರಂಗಕರ್ಮಿಗಳನ್ನು ರೂಪಿಸಿದ ರತ್ನಾ ತೀರಾ ಇತ್ತೀಚೆಗೆ ವೀಲ್ ಚೇರ್ ಮೇಲೆ ಕುಳಿತೇ 'ಅಯನ್ ಶಾಂತಿ ಕುಟೀರ' ನಾಟಕದಲ್ಲಿ ಅಭಿನಯಿಸಿದ್ದರು ಎನ್ನುವುದನ್ನು ನೆನಪು ಮಾಡಿ ಕೊಂಡಿರುವ ನಾಡೋಜ ಡಾ.ಮಹೇಶ ಜೋಶಿಯವರು ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಅವರು ಇಟ್ಟುಕೊಂಡ ಒಡನಾಟವನ್ನು ಸ್ಮರಿಸಿ ಈ ಅಗಲುವಿಕೆಯನ್ನು ಸಹಿಸುವ ಶಕ್ತಿ ಅವರ ಕುಟುಂಬ ವರ್ಗದವರಿಗೆ ಬರಲಿ ಎಂದು ಆಶಿಸಿದ್ದಾರೆ

ಎನ್.ಎಸ್.ಶ್ರೀಧರ ಮೂರ್ತಿ

ಸಂಚಾಲಕರು, ಪ್ರಕಟಣಾ ವಿಭಾಗ

ಕನ್ನಡ ಸಾಹಿತ್ಯ ಪರಿಷತ್ತು